ಅಖಿಲ ಕರ್ನಾಟಕ
# ಶಿಕ್ಷಕ ಸಮಾಚಾರ
ಆಗಸ್ಟ್ 2025 ಮಾಸ ಪತ್ರಿಕೆ

ಸಂಪುಟ/Volume : 47
ಸಂಚಿಕೆ/Issue : 11
ಪುಟ/Pages : 12
ಬೆಲೆ/Price : ₹ 15/–

Akhila Karnataka Shikshaka Samachar | August 2025 | Monthly

## ವಾರ್ಷಿಕ ಸಾಮಾನ್ಯ ಸಭೆ - ಕಾರ್ಯಕಾರಿಣಿ







## 38ನೇ ಪ್ರತಿಭಾ ಪುರಸ್ಕಾರ ಬೆಂಗಳೂರು ಉತ್ತರ ಜಿಲ್ಲೆ






## 79ನೇ ಸ್ವಾತಂತ್ರ್ಯ ದಿನಾಚರಣೆ

## ಸಂಪಾದಕೀಯ

ಆತ್ಮೀಯರೇ,

ಆಗಸ್ಟ್ ಮಾಹೆಯು ಶ್ರಾವಣ- ಭಾದ್ರಪದ ಮಾಸಗಳ ಸಮ್ಮಿಲನವಾಗಿದೆ. ಈ ತಿಂಗಳಿನಲ್ಲಿ ಹಿಂದೂಗಳು ಅತ್ಯಂತ ಪವಿತ್ರವಾದ ಹಬ್ಬಗಳನ್ನು ಆಚರಿಸುವರು. ಅವುಗಳಲ್ಲಿ ಮಹಾಲಕ್ಷ್ಮಿಯನ್ನು ಶ್ರದ್ಧಾಭಕ್ತಿಗಳಿಂದ ಪೂಜಿಸುವ ಹಬ್ಬವೇ ವರಮಹಾಲಕ್ಷ್ಮಿ ಹಬ್ಬ. ಈ ಆಚರಣೆಯು ಕುಟುಂಬದಲ್ಲಿ ಸಂತೋಷ, ಸಮೃದ್ಧಿ ಮತ್ತು ಶಾಂತಿಯನ್ನು ತರುತ್ತದೆ ಎಂದು ನಂಬಲಾಗಿದೆ.

ರಕ್ಷಾ ಬಂಧನವು ಸಹೋದರ- ಸಹೋದಯರ ಪ್ರೀತಿ ಮತ್ತು ರಕ್ಷಣೆಯ ಸಂಕೇತವಾಗಿರುತ್ತದೆ. ಸಹೋದರಿಯರು ತಮ್ಮ ಸಹೋದರರನ ಕೈಗೆ ರಕ್ಷೆಯನ್ನು ಕಟ್ಟಿ ಅವರ ಆರೋಗ್ಯ ಮತ್ತು ಸಮೃದ್ಧಿಗಾಗಿ ಭಗವಂತನಲ್ಲಿ ಪ್ರಾರ್ಥಿಸುವರು. ಈ ಸಂದರ್ಭದಲ್ಲಿ ಸಹೋದರರು ತಮ್ಮ ಸಹೋದರಿಯರನ್ನು ರಕ್ಷಿಸುವ ಕುರಿತು ಪಣ ತೊಡುತ್ತಾರೆ.

ನಮ್ಮ ಹಿಂದೂಸ್ಥಾನವು ಸಾಂಸ್ಕೃತಿಕ, ಸಾಹಿತ್ಯಿಕ ಹಾಗೂ ಆರ್ಥಿಕವಾಗಿ ಸಂಪದ್ಭರಿತವಾದ ರಾಷ್ಟ್ರವಾಗಿತ್ತು. ವೇದೋಪನಿಷತ್ತುಗಳು, ರಾಮಾಯಣ, ಮಹಾಭಾರತದಂತಹ ಉತ್ಕೃಷ್ಟ ಜ್ಞಾನಭಂಡಾರಗಳ ಆಗರವಾಗಿತ್ತು. ಕಲೆ, ಸಾಹಿತ್ಯ, ವಾಸ್ತುಶಿಲ್ಪ, ಬಂಗಾರ, ಬೆಳ್ಳಿ, ವಜ್ರ, ವೈಢೂರ್ಯಗಳು, ಅರಣ್ಯ ಸಂಪತ್ತುಗಳ ಕಣಜವಾಗಿತ್ತು. ಇಂತಹ ನಮ್ಮ ದೇಶದ ಮೇಲೆ ಪರಕೀಯರು ಆಕ್ರಮಣ ಮಾಡಿ ಸಂಪತ್ತನ್ನು ಲೂಟಿ ಮಾಡಿದರು. ನಮ್ಮ ದೇಶ ಸರ್ವತಂತ್ರ ಸ್ವತಂತ್ರ ರಾಷ್ಟ್ರವಾಗಬೇಕೆಂಬ ಗುರಿಯನ್ನು ಇಟ್ಟುಕೊಂಡು ಹಲವಾರು ದೇಶಭಕ್ತರು ತಮ್ಮ ಪ್ರಾಣವನ್ನು ಅರ್ಪಣೆ ಮಾಡಿದ್ದಾರೆ. ಇದರ ಫಲವಾಗಿ 1947 ಆಗಸ್ಟ್ 15ರಂದು ಭಾರತವು ಬ್ರಿಟಿಷರ ದಾಸ್ಯದಿಂದ ಮುಕ್ತವಾಗಿ ಸ್ವತಂತ್ರವಾಯಿತು. ಈ ದೇಶದ ನಾಗರಿಕರಾದ ನಾವು ಈ ಸ್ವತಂತ್ರವನ್ನು ಉಳಿಸಿಕೊಂಡು ಬೆಳೆಸಿಕೊಂಡು ಹೋಗಬೇಕಾದುದು ನಮ್ಮ ಕರ್ತವ್ಯವಲ್ಲವೇ? ರಾಷ್ಟ್ರದೇವೋಭವ ಎನ್ನುವ ಪರಿಕಲ್ಪನೆಯನ್ನು ಇಟ್ಟುಕೊಂಡು ನಮ್ಮ ದೇಶದ ಏಕತೆ ಮತ್ತು ಸಮಗ್ರತೆಗಾಗಿ ದಿಟ್ಟ ಹೆಜ್ಜೆಯನ್ನಿಟ್ಟಾಗ ನಮ್ಮ ದೇಶ ಎಲ್ಲ ಕ್ಷೇತ್ರಗಳಲ್ಲಿ ಪ್ರಗತಿ ಸಾಧಿಸಲು ಸಾಧ್ಯವಾಗುತ್ತಿದೆ ಮತ್ತು ಸಾಧ್ಯವಾಗುತ್ತದೆ.

ಶಿವಾಜಿ ಮಹಾರಾಜರು ಮೊಘಲರ ವಿರುದ್ಧ ಹೋರಾಟ ಮಾಡುತ್ತಿದ್ದ ತನ್ನ ಪ್ರಜೆಗಳಲ್ಲಿ ರಾಷ್ಟ್ರೀಯ ಭಾವನೆಯನ್ನು ಉತ್ತೇಜಿಸಲು ಪ್ರಪ್ರಥಮವಾಗಿ ಗಣೇಶ ಚತುರ್ಥಿಯನ್ನು ಸಾರ್ವಜನಿಕವಾಗಿ ಆಚರಣೆಗೆ ನಾಂದಿ ಹಾಡಿದರು. ತದ ನಂತರ ಬಾಲಗಂಗಾಧರ ತಿಲಕರು ಈ ಆಚರಣೆಯನ್ನು ಪುನರುಜ್ಜೀವನಗೊಳಿಸಿದರು. ಇಂದು ದೇಶವ್ಯಾಪಿ ಅಲ್ಲದೇ ವಿಶ್ವದಾದ್ಯಂತ ವಿದ್ಯಾಧಿಪತಿಯಾದ ಗಣೇಶನನ್ನು ಪೂಜಿಸುತ್ತಾರೆ.

ನಮ್ಮ ಮಾಧ್ಯಮಿಕ ಶಿಕ್ಷಕ ಸಂಘದ ರಾಜ್ಯಕಾರ್ಯಕಾರಿಣಿಯು ಕಳೆದ ತಿಂಗಳಿನಲ್ಲಿ ಯಶಸ್ವಿಯಾಗಿ ಜರುಗಿತು. ವಾರ್ಷಿಕ ಕ್ರಿಯಾಯೋಜನೆಯಂತೆ ಗುರುವಂದನಾ ಕಾರ್ಯಕ್ರಮಗಳು ಕೆಲವು ಜಿಲ್ಲೆಗಳಲ್ಲಿ ನಡೆದಿದೆ. ವಿದ್ಯಾರ್ಥಿಗಳಿಗೆ ಉತ್ತೇಜನ ನೀಡುವ ಪ್ರತಿಭಾ ಪುರಸ್ಕಾರ ಕಾರ್ಯಕ್ರಮವು ಬೆಂಗಳೂರು ಉತ್ತರ ಜಿಲ್ಲೆಯಲ್ಲಿ ಯಶಸ್ವಿಯಾಗಿ ಸಂಪನ್ನವಾಗಿದೆ. ಈ ತಿಂಗಳು ಬೆಂಗಳೂರು ದಕ್ಷಿಣ ಜಿಲ್ಲೆಯ ಪ್ರತಿಭಾ ಪುರಸ್ಕಾರ ಕಾರ್ಯಕ್ರಮವಿದೆ. ಹೀಗೆ ವಿವಿಧ ಜಿಲ್ಲೆಗಳಲ್ಲಿಯೂ ವಿವಿಧ ಕಾರ್ಯಕ್ರಮಗಳನ್ನು ಆಯೋಜಿಸಿ ವರದಿಗಳನ್ನು ಕಳುಹಿಸಬೇಕೆಂದು ಪದಾಧಿಕಾರಿಗಳಲ್ಲಿ ನನ್ನ ಮನವಿ.

ಸಂಪಾದಕ


## ಸಂಪಾದಕ ಮಂಡಳಿ

ಗೌರವ ಸಂಪಾದಕರು
ಹೆಚ್. ನಾಗಭೂಷಣರಾವ್

ಪ್ರಧಾನ ಸಂಪಾದಕರು ಮತ್ತು ಪ್ರಕಾಶಕರು
ಜೆ. ಎಮ್. ಜೋಶಿ

ವ್ಯವಸ್ಥಾಪಕ ಸಂಪಾದಕರು
ಸಂದೀಪ ಬೂದಿಹಾಳ

ಗೌರವ ಸಲಹೆಗಾರರು
ಚಿದಾನಂದ ಆ. ಪಾಟೀಲ
ಮಮತಾ ಡಿ. ಕೆ.

ಸಂಪಾದಕ ಮಂಡಳಿ
ಎನ್. ನಾಗರಾಜ್
ನಂ. ನಾಗಲಕ್ಷ್ಮಿ
ಸೀತಾಲಕ್ಷ್ಮಿ ಆರ್.

ವಿನ್ಯಾಸಕಾರರು
ಪ್ರೇರಣಾ

ಕಛೇರಿ ವ್ಯವಸ್ಥಾಪಕರು
ವರಲಕ್ಷ್ಮಿ ಕೆ. ಎನ್.


## ಪರಿವಿಡಿ


- ತುರ್ತುಪರಿಸ್ಥಿತಿಯ ನೈಜ ಕಥೆ – ಹೆಚ್. ನಾಗಭೂಷಣ ರಾವ್ 3
- ರಕ್ಷಾಬಂಧನ – ನಂ. ನಾಗಲಕ್ಷ್ಮಿ 4
- ಪೂರ್ವಸೂರಿಗಳೊಡನೆ ಅಂಕಣದಲ್ಲಿ 4 – ನಂ. ನಾಗಲಕ್ಷ್ಮಿ 6
- ವಾರ್ಷಿಕ ಸಾಮಾನ್ಯ ಸಭೆ ವರದಿ 7
- 38ನೆಯ ಪ್ರತಿಭಾ ಪುರಸ್ಕಾರ ಬೆಂಗಳೂರು ಉತ್ತರ ಜಿಲ್ಲೆ 9
- ಗುರುವಂದನ ಕಾರ್ಯಕ್ರಮ – ಯಾದಗಿರಿ 9
- ಗುರುವಂದನ ಕಾರ್ಯಕ್ರಮ ಬೆಂಗಳೂರು ಉತ್ತರ ಮತ್ತು ದಕ್ಷಿಣ ಜಿಲ್ಲೆ 11
- ಚಿತ್ರಸುದ್ದಿ 12

# ಗುರುವಂದನ ಕಾರ್ಯಕ್ರಮದ ವರದಿ

## ಬೆಂಗಳೂರು ಉತ್ತರ ಜಿಲ್ಲೆ




ದಿ. 19.7.2025ರ ಶನಿವಾರ ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘ, ಬೆಂಗಳೂರು ಉತ್ತರ ಜಿಲ್ಲೆಯ ವತಿಯಿಂದ ವ್ಯಾಸ ಮಹರ್ಷಿಗಳ ಸ್ಮರಣೆಯಲ್ಲಿ, ಎಲ್ಲಾ ಗುರುಗಳ ನೆನಪಿನಲ್ಲಿ ಗುರುಗಳಿಗೆ ನೀಡುವ ಮಹತ್ತರ ಸ್ಥಾನ, ಅವರು ನಡೆದ ಹಾದಿ, ಗುರುಗಳ ಮೌಲ್ಯ, ಆದರ್ಶಗಳನ್ನು ಇಂದಿನ ವಿದ್ಯಾರ್ಥಿಗಳ ಸಾರ್ಥಕ ಬದುಕಿಗೆ ನೆನಪಿಸುವ "ಗುರುವಂದನಾ ಕಾರ್ಯಕ್ರಮವನ್ನು ಮಾಕಳಿ ಬಳಿ ಇರುವ ಹಾರೋಕ್ಯಾತನ ಹಳ್ಳಿಯಲ್ಲಿ ಸ್ಥಾಪಿತವಾಗಿರುವ ಎಂಇಎಸ್ ಸಮೂಹ ಶಿಕ್ಷಣ ಸಂಸ್ಥೆಯಲ್ಲಿ ವಿಶಿಷ್ಟ ರೀತಿಯಲ್ಲಿ ಶಾಲೆಯ ಆಡಳಿತ ಮಂಡಲಿ, ಶಿಕ್ಷಕರು ಮತ್ತು ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘದ ಕಾರ್ಯಕರ್ತರೊಂದಿಗೆ ಆಚರಿಸಲಾಯಿತು.

ಎಂ.ಇ.ಎಸ್ ಶಿಕ್ಷಣ ಸಂಸ್ಥೆಯ ಶಿಕ್ಷಕಿ ಶ್ರೀಮತಿ ಗೀತಾ ಮತ್ತು ತಂಡದವರ ಪ್ರಾರ್ಥನೆಯೊಂದಿಗೆ ಕಾರ್ಯಕ್ರಮ ಪ್ರಾರಂಭವಾಯಿತು. ಎಲ್ಲಾ ಕಾರ್ಯಕರ್ತರು ಹಾಗೂ ಶಿಕ್ಷಕರು ಸಾಮೂಹಿಕವಾಗಿ ಸರಸ್ವತಿ ವಂದನೆ ನಡೆಸಿಕೊಟ್ಟರು. ಬೆಂಗಳೂರು ಉತ್ತರ ಜಿಲ್ಲೆಯ ಗೌರವಾಧ್ಯಕ್ಷರಾದ ಶ್ರೀ ಮಲ್ಲಿಕಾರ್ಜುನ.ಜಿ.ಕೂಡಗಿರವರು ವೇದಿಕೆಯ ಮೇಲಿನ ಗಣ್ಯರನ್ನು ಪರಿಚಯಿಸಿ ಸಭೆಯಲ್ಲಿ ಹಾಜರಿದ್ದ ಎಲ್ಲರನ್ನೂ ಹಾರ್ದಿಕವಾಗಿ ಸ್ವಾಗತಿಸಿದರು. ನಂತರ ವೇದಿಕೆಯಲ್ಲಿದ್ದ ಗಣ್ಯರು ಹಾಗೂ ಪದಾಧಿಕಾರಿಗಳು, ಶಿಕ್ಷಕರು ವ್ಯಾಸಮಹರ್ಷಿಗಳ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.

ಕಾರ್ಯಕ್ರಮದ ನಿರೂಪಣೆಯನ್ನು ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘ, ಬೆಂಗಳೂರು ಉತ್ತರ ವಲಯ–3ರ ಅಧ್ಯಕ್ಷರಾದ ಶ್ರೀ ಗಂಗಾಧರ.ಎಂ.ವಿರವರು ಉತ್ತಮವಾಗಿ ನಡೆಸಿಕೊಟ್ಟರು. ಬೆಂಗಳೂರು ಉತ್ತರ ಜಿಲ್ಲೆ ಹಾಗೂ ಗ್ರಾಮಾಂತರ ಜಿಲ್ಲೆಯ ವಿಭಾಗ ಪ್ರಮುಖರಾದ ಶ್ರೀ ಗಂಗಪ್ಪರವರು ತಮ್ಮ ಪ್ರಾಸ್ತಾವಿಕ ನುಡಿಗಳಲ್ಲಿ ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘವು 1965 ರಿಂದ ಶ್ರೀ ಕೃ.ನರಹರಿಯವರ ಮಾರ್ಗದರ್ಶನದಲ್ಲಿ ನಡೆಸಿಕೊಂಡು ಬರುತ್ತಿರುವ ಕಾರ್ಯಕ್ರಮಗಳ ವಿವರಗಳನ್ನು ನೀಡಿದರು.

ಕಾರ್ಯಕ್ರಮದ ಪ್ರಮುಖ ವಕ್ತಾರರಾಗಿ ಆಗಮಿಸಿದ ರಾಷ್ಟ್ರೀಯ ಸ್ವಯಂಸೇವಕ ಸಂಘ, ಬೆಂಗಳೂರು ಮಹಾನಗರದ ಪ್ರಚಾರ ಪ್ರಮುಖರು ಆದ ಶ್ರೀಯುತ ಪ್ರಮೋದ್ ಎನ್ ಜಿ ರವರು ಮಹರ್ಷಿ ವೇದ ವ್ಯಾಸರು ಹೇಗೆ ವಿಶ್ವಗುರುಗಳಾದರು ಇಂದಿನ ಗುರು ಪರಂಪರೆ ಹೇಗಿದೆ, ನಮ್ಮ ಜೀವನದ ಗತಿಯು ಕೇವಲ ಹುಟ್ಟಿನಿಂದ ಸಾವಿನ ಕಡೆಗೆ ಅಲ್ಲ, ಕತ್ತಲಿನಿಂದ ಬೆಳಕಿನಡೆಗೆ ಸಾಗುವಂತಿರಬೇಕು ಎಂದು ತಿಳಿಸಿದರು. ಕಲಿಯುವ ಮಾನಸಿಕತೆಯನ್ನು ಇಂದಿನ ವಿದ್ಯಾರ್ಥಿ ಪೀಳಿಗೆಯಲ್ಲಿ ಬೆಳೆಸಬೇಕು, ನನಗೆ ಗೊತ್ತಿಲ್ಲ ಎನ್ನುವುದು ಗೊತ್ತಾದರೆ ಅದು ಜ್ಞಾನದ ಮೊದಲ ಹೆಜ್ಜೆ ಎಂಬುದನ್ನು ಮನದಟ್ಟು ಮಾಡಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದ ಕಾರ್ಯಾಲಯ ಪ್ರಮುಖರಾದ ಶ್ರೀ ಜೆ.ಎಂ ಜೋಷಿರವರು 60 ವರ್ಷಗಳಿಂದ ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘವು ಶಿಕ್ಷಣ, ಶಿಕ್ಷಕ, ವಿದ್ಯಾರ್ಥಿ, ಸಮಾಜಕ್ಕಾಗಿ ಯಾವ ರೀತಿಯಲ್ಲಿ ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಯಶಸ್ವಿಯಾಗಿ ಶಿಕ್ಷಣ ಕ್ಷೇತ್ರದಲ್ಲಿ ಸಾಗುತ್ತಿದೆ ಎಂದು ತಿಳಿಸಿದರು. ರಾಷ್ಟ್ರದೇವೋ ಭವ ಎಂಬ ಉಕ್ತಿಯಂತೆ ನಮ್ಮ ರಾಷ್ಟ್ರಕ್ಕೆ ಹೆಚ್ಚು ಮಹತ್ವ ನೀಡಬೇಕೆಂಬುದನ್ನು ತಿಳಿಸಿಕೊಟ್ಟರು. ಬೆಂಗಳೂರು ಉತ್ತರ ಜಿಲ್ಲೆಯ ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ಕಿರಣ್ ಕುಮಾರ್ ಎಸ್ ರವರು ವಂದನಾರ್ಪಣೆ ನಡೆಸಿಕೊಟ್ಟರು. ಸಾಮೂಹಿಕ ಶಾಂತಿಮಂತ್ರದೊಂದಿಗೆ ಕಾರ್ಯಕ್ರಮ ಸಂಪನ್ನವಾಯಿತು.

– ಶ್ರೀ ಗಂಗಾಧರ.ಎಂ.ವಿ. ಅಧ್ಯಕ್ಷರು, ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘ ಬೆಂಗಳೂರು ಉತ್ತರ ವಲಯ=3

---

## ಬೆಂಗಳೂರು ದಕ್ಷಿಣ ಜಿಲ್ಲೆ



ಕ.ರಾ.ಮಾಧ್ಯಮಿಕ ಶಿಕ್ಷಕ ಸಂಘ, ಬೆಂಗಳೂರು ದಕ್ಷಿಣ ಜಿಲ್ಲೆ ಗುರುವಂದನಾ ಕಾರ್ಯಕ್ರಮವನ್ನು ದಿ.02.08.2025ರ ಶನಿವಾರ ಮಧ್ಯಾಹ್ನ ಕಾಡುಗೋಡಿ ಸ.ಪ್ರೌ.ಶಾಲೆಯಲ್ಲಿ ಹಮ್ಮಿಕೊಳ್ಳಲಾಗಿತ್ತು ಕಾರ್ಯಕ್ರಮವನ್ನು ಬೆಂಗಳೂರು ದಕ್ಷಿಣ ಜಿಲ್ಲೆಯ ಅಧ್ಯಕ್ಷರು ಹಾಗೂ ಶಾಲೆಯ ಮುಖ್ಯ ಶಿಕ್ಷಕರಾದ ಶ್ರೀ ಮುನಿರಾಜು ಇವರ ಅಧ್ಯಕ್ಷತೆಯಲ್ಲಿ ನೆರವೇರಿತು,

ಕಾರ್ಯಕ್ರಮವನ್ನು ವಿದ್ಯಾರ್ಥಿಗಳ ಪ್ರಾರ್ಥನೆಯೊಂದಿಗೆ ಆರಂಭಿಸಿ, ಹಿರಿಯ ಶಿಕ್ಷಕರಾದ ಶ್ರೀ ರಮೇಶ್ ರವರು ವೇದಿಕೆಯಲ್ಲಿನ ಶಿಕ್ಷಕರನ್ನು ಸ್ವಾಗತಿಸಿ ಪರಿಚಯಿಸಿದರು, ಪ್ರಾಸ್ತಾವಿಕವಾಗಿ ಶಿಕ್ಷಕ ಸಂಘದ ಕುರಿತಂತೆ ಹಾಗೂ ಕಾರ್ಯಕ್ರಮದ ಉದ್ದೇಶವನ್ನು ಶ್ರೀ ಮುನಿರಾಜು ರವರು ತಿಳಿಸಿದರು.

ವಿಶೇಷವಾಗಿ ನಮ್ಮ ಸಂಸ್ಕೃತಿಯ "ಗುರು ಪರಂಪರೆ ಹಾಗೂ ಗುರುವಿನ ಮಹತ್ವ"ದ ಕುರಿತಂತೆ ಶ್ರೀ ಗಂಗಾಧರಾಚಾರಿ.ಎ ಇವರು ಸವಿಸ್ತಾರವಾಗಿ ತಿಳಿಸಿದರು ಅಂತಿಮವಾಗಿ ಶ್ರೀಮತಿ ಚಂದ್ರಮ್ಮರವರು ವಂದನಾರ್ಪಣೆಯನ್ನು ಸಲ್ಲಿಸಿದರು, ಶಿಕ್ಷಕರು& ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

– ಮುನಿರಾಜು.ಎಂ, ಅಧ್ಯಕ್ಷರು, ಬೆಂಗಳೂರು ದಕ್ಷಿಣ ಜಿಲ್ಲೆ.

MAG(3)/NPP/23/2020-21 Registered No. RNI 45459/85 Posted at Bangalore PSO Bangalore -560 026
Date of Publishing : 17-08-2025 Date of Posting 20th or 21st of every month Posted at Periodical Rate

# ಚಿತ್ರ ಸುದ್ದಿ



ದಿನಾಂಕ –30–07–2025 ರಂದು KRMSS ಹಾಗೂ ವಿವಿಧ ಭಾಷಾ ಸಂಘಗಳ ಪದಾಧಿಕಾರಿಗಳು ದೇಶೀಯ ಭಾಷಾ ಹಿತರಕ್ಷಣಾ ಒಕ್ಕೂಟದ ಜೊತೆ ಸೇರಿ ತ್ರಿಭಾಷಾ ಸೂತ್ರ ನೀತಿಯನ್ನು ಮುಂದುವರಿಸುವಂತೆ ಆಗ್ರಹಿಸಿ ಘನತೆವೆತ್ತ ರಾಜ್ಯಪಾಲರಾದ ಶ್ರೀ ಥಾವರಚಂದ ಗೆಲ್ಹೋಟ್ ಅವರನ್ನು ಮತ್ತು ಮಾನ್ಯ ಶಾಸಕರು ಹಾಗೂ ಮಾಜಿ ಶಿಕ್ಷಣ ಸಚಿವರಾದ ಶ್ರೀ ಸುರೇಶ್ ಕುಮಾರ್ ಅವರನ್ನು ಭೇಟಿ ಮಾಡಿ ಮನವಿ ಸಲ್ಲಿಸಿದರು.




ಜನಸೇವಾ ವಿದ್ಯಾ ಕೇಂದ್ರ ಚನ್ನೇನಹಳ್ಳಿ ಬೆಂಗಳೂರು ಇಲ್ಲಿ 2024–25 ನೇ ಸಾಲಿಗೆ ಸಂಬಂಧಿಸಿದ ವಾರ್ಷಿಕ ಸಾಮಾನ್ಯ ಸಭೆ



ಗುರುವಂದನಾ ಕಾರ್ಯಕ್ರಮ – ಯಾದಗಿರಿ



ಬೆಂಗಳೂರು ಉತ್ತರ ಜಿಲ್ಲೆಯ 38 ನೇ ಪ್ರತಿಭಾ ಪುರಸ್ಕಾರದಲ್ಲಿ ಪಾಲ್ಗೊಂಡ ವಿದ್ಯಾರ್ಥಿಗಳು & ಪೋಷಕರು

IF UNDELIVERED PLEASE RETURN TO SENDER

Printed By :
J. M. Joshi
Karnataka Rajya Madhyamika Shikshaka Sangha ®.)
Published By:
J. M. Joshi
Karnataka Rajya Madhyamika Shikshaka Sangha (R.)
Owned By : J. M. Joshi
on behalf of Karnataka Rajya Madhyamika Shikshaka Sangha (R.)

Printed At: Rashtrotthana Mudranalaya,
'Keshava Shilpa', Kempegowda Nagar, Bengaluru -560 019

Published By : Karnataka Rajya Madhyamika Shikshaka Sangha (R.)
# 55, 'Yadavasmurthi', 1st Main, Sheshadripuram, Bengaluru -560 020

Editor : J. M. Joshi, Karnataka Rajya Madhyamika Shikshaka Sangha (R.), Bengaluru -20

srushtidesigns@gmail.com